

# ಡಿಶೂಮ್ ಡಿಶೂಮ್

■ ರಂಜಿತಾ ಮಹಾಜನ

ಕಲೆ: ಸಂತೋಷ್ ಸಸಿಹಿತ್ಲು

ಸೋನು, ಪುಟ್ಟಿ ಇಬ್ಬರು ಪುಟಾಣಿ ಅಣ್ಣ ತಂಗಿ. ಶಾಲೆಯಿಂದ ಮರಳಿದ ಮೇಲೆ ಯೂಟ್ಯೂಬಿನಲ್ಲಿ ಕಾರ್ಟೂನ್ ಚಿತ್ರಗಳನ್ನು ನೋಡುತ್ತಿದ್ದರು. ಅಮ್ಮ ಹೇಳಿದಂತೆ ಅದರಲ್ಲಿ ನೀತಿಕತೆ, ಪುರಾಣ ಕತೆ, ಐತಿಹಾಸಿಕ ವ್ಯಕ್ತಿಗಳ ಕತೆಗಳನ್ನು ಮಾತ್ರ ನೋಡುತ್ತಿದ್ದರು. ಒಂದು ದಿನ ಅವರಿಗೆ ಅದರಲ್ಲಿ ಕಾದಾಡುವ (ಫೈಟಿಂಗ್) ದೃಶ್ಯವಿರುವ ಕಾರ್ಟೂನಿನ ಜಾಹೀರಾತು ಕಾಣಿಸಿತು. ಪುಟ್ಟಿ ಕುತೂಹಲಕ್ಕೆ ಅದನ್ನು ಕ್ಲಿಕ್ಕಿಸಿದಾಗ ಅದರಲ್ಲಿ ನಾಲ್ಕಾರು ಜನ ಹೊಡೆದಾಡುವ ದೃಶ್ಯವಿತ್ತು. ಆ ದೃಶ್ಯಾವಳಿಗಳು ಇವರಿಬ್ಬರಿಗೆ ಬಹಳ ಇಷ್ಟವಾಯಿತು. ಆ ದೃಶ್ಯದಲ್ಲಿ ನಾಯಕ ಇತರರಿಗೆ ಪೆಟ್ಟು ನೀಡಿದಾಗಲೊಮ್ಮೆ ಈ ಪುಟಾಣಿಗಳು ನಗುತ್ತಿದ್ದರು.

ಸಂಜೆ ಅಮ್ಮ ಕೆಲಸದಿಂದ ಮರಳಿದಾಗ ಮುದ್ದು ಸೋನು ಈ ಬಗೆಗೆ ಹೇಳಿದ. ಅಮ್ಮ ಅಂತಹ ಚಿತ್ರಗಳನ್ನು ವೀಕ್ಷಿಸಬಾರದು ಎಂದು ತಿಳಿ ಹೇಳಿದಳು. ಆ ಕ್ಷಣಕ್ಕೆ ಇಬ್ಬರು ಒಪ್ಪಿದರು; ಆದರೆ ಅಮ್ಮನಿಗೆ ಗೊತ್ತಿತ್ತು ಇಬ್ಬರೂ ಒಲ್ಲದ ಮನದಿಂದ ಒಪ್ಪಿದ್ದಾರೆ ಎಂದು.

ಆ ಕಾರ್ಟೂನಿನ ಬಗೆಗೆ ಪುಟ್ಟಿ ಶಾಲೆಯಲ್ಲಿ ತನ್ನ ಗೆಳೆಯ ಅಪ್ಪುವಿಗೆ ಹೇಳಿದಳು. ಅಪ್ಪು ತಾನು ಸಹ ಅಂತಹದ್ದೇ ಕಾರ್ಟೂನ್ ಚಿತ್ರಗಳನ್ನು ಯೂಟ್ಯೂಬಿನಲ್ಲಿ ನೋಡುತ್ತಿರುತ್ತೇನೆ ಎಂದು ಹೇಳಿದ. ಇದರ ಜೊತೆಗೆ ಇನ್ನಷ್ಟು ಅಂತಹುದೇ ವಿಡಿಯೊ ಸಿಗುವ ಹೆಸರುಗಳನ್ನು ಹೇಳಿ ಅವನೂ ವೀಕ್ಷಿಸುವಂತೆ ಸಲಹೆ ನೀಡಿದ.

ಮರುದಿನ ಇಬ್ಬರು ಪುಟಾಣಿಗಳು ಮತ್ತೆ ಹೊಡೆದಾಟದ ದೃಶ್ಯಗಳಿರುವ ಕಾರ್ಟೂನ್ ನೋಡಿದರು. ಅಜ್ಜ, ಅಜ್ಜಿ ನೋಡಬೇಡ ಎಂದರೂ ಅವರ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅಮ್ಮ ಆಫೀಸಿನಿಂದ ಬರುವ ಎರಡು ಗಂಟೆ ಮೊದಲೇ ಅವರು ಶಾಲೆಯಿಂದ ಮನೆಗೆ ಬಂದಿರುತ್ತಿದ್ದರು. ಹಾಗಾಗಿ ಅಮ್ಮ ಬರುವ ಮೊದಲೇ ಅಂತಹ ಕಾರ್ಟೂನ್ ನೋಡಿ ಮುಗಿಸುತ್ತಿದ್ದರು. ದಿನವೂ ಅಂತಹುದೇ ಎಳೆ ಇರುವ ಬೇರೆ ಬೇರೆ ದೃಶ್ಯಾವಳಿಗಳ ತುಣುಕುಗಳು ಅವರಿಗೆ ಹೆಚ್ಚು ಕಾಣಿಸತೊಡಗಿದವು. ಅದನ್ನು ನೋಡುವುದು ಹಾಗೂ ತಾನು ಯಾವ ದೃಶ್ಯಾವಳಿ ನಿನ್ನೆ ನೋಡಿದೆ ಎಂದು ಪುಟ್ಟಿ ಸ್ನೇಹಿತರೊಂದಿಗೆ ಹಂಚಿಕೊಳ್ಳುವುದು ಸಾಮಾನ್ಯವಾಯಿತು. ಇತರೆ ಹುಡುಗರಿಗೂ ಅದರಲ್ಲಿ ಕುತೂಹಲ ಮೂಡಿ ಅವರೂ ಅಂತಹ ಚಿತ್ರ ವೀಕ್ಷಿಸತೊಡಗಿದರು.

ದಿನದಿಂದ ದಿನಕ್ಕೆ ಅದೇ ದೃಶ್ಯಗಳ ಕಾರ್ಟೂನ್ ಚಿತ್ರಗಳು ಅವರಿಗೆ ಇಷ್ಟವಾಗತೊಡಗಿದವು.

ಟೀವಿಯಲ್ಲಿ ಸದಾ ಹೊಡೆಯುವ, ಬಡಿಯುವ, ಕಾದಾಡುವ ದೃಶ್ಯಗಳನ್ನೇ ನೋಡುತ್ತಿದ್ದರು. ಅದರ ಪರಿಣಾಮ ಮನೆಯಲ್ಲಿ ಇರುವೆ, ನೊಣಗಳಂತಹ ಕೀಟಗಳು ಕಾಣಿಸಿಕೊಂಡಾಗ ಅವನ್ನು ಹೊಡೆದು ಸಾಯಿಸುವ ಪ್ರವೃತ್ತಿ ಬೆಳೆಯಿತು. ಸುಮ್ಮ ಸುಮ್ಮನೆ ಸೋಫಾ ಮೇಲಿನಿಂದ, ಕುರ್ಚಿ ಮೇಲಿನಿಂದ ಜಿಗಿಯತೊಡಗಿದರು. ಯಾರು ಎಷ್ಟು ದೂರ ಹಾರುತ್ತಾರೆ ಎಂಬ ಸ್ಪರ್ಧೆ ಹುಟ್ಟಿಕೊಂಡಿತು. ತಾವೇನೋ ದೊಡ್ಡ ಸಾಹಸ ಮಾಡಿದಂತೆ ಶೌರ್ಯ ಮೆರೆಯುವ ಗೀಳು ಅಂಟಿಕೊಂಡಿತು.

ಶಾಂತವಾಗಿ ಒಬ್ಬರಿಗೊಬ್ಬರು ಸಹಕಾರಿಯಾಗಿ ಆಟವಾಡುತ್ತಿದ್ದ ಪುಟ್ಟಿ–ಸೋನು ಆ ಕಾರ್ಟೂನ್ ದೃಶ್ಯಾವಳಿಗಳಿಂದ ಪ್ರೇರಿತರಾಗಿ ಹೊಡೆದಾಡಲು ಶುರುಮಾಡಿದರು. ಆ ಆಟ ಮೊದಮೊದಲು ಮೋಜಿನಿಂದ ಕೂಡಿರುತ್ತಿತ್ತು; ಬರುಬರುತ್ತ ಪುಟ್ಟಿ ತಮ್ಮನಿಗೆ ಜೋರಾದ ಏಟು ನೀಡತೊಡಗಿದ. ಪುಟಾಣಿ ಸೋನು ಅಣ್ಣನ ಏಟು ತಾಳಲಾರದೆ ಅಳತೊಡಗಿದ. ಅದರಿಂದ ಹೆದರಿದ ಸೋನು, ತಂಗಿಗೆ ಸಮಾಧಾನಿಸಿ ಅಮ್ಮನಿಗೆ ಹೇಳಕೂಡದು ಎಂದು ಮಾತು ತೆಗೆದುಕೊಂಡ. ಅದಕ್ಕೆ ಪ್ರತಿಯಾಗಿ ತಾನು ನೀಡಿದ ಏಟನ್ನು ಮರಳಿಸುವಂತೆ ಹೇಳಿದ. ಪುಟಾಣಿ ಪುಟ್ಟಿಯಿಂದ ಏಟು ಅಷ್ಟೇನು ನೋವುಂಟು ಮಾಡುತ್ತಿರಲಿಲ್ಲ ಹೀಗಾಗಿ ಸೋನು ತಂಗಿಯಿಂದ ಹೊಡೆಯಿಸಿಕೊಂಡ.

ಅಮ್ಮನಿದ್ದಾಗ ಅವಳು ಗದರುತ್ತಾಳೆ ಎಂಬ ಭಯದಲ್ಲಿ ಇಂತಹ ಆಟ ಆಡದ ಅಣ್ಣ–ತಂಗಿ